**ಪಾಠ–5** **ಜುಲೈ 27–ಆಗಸ್ಟ್ 2**

# ಪ್ರವಾದಿಗಳ ಕೂಗು



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಅಧ್ಯಯನಕ್ಕಾಗಿ ಓದಿರಿ : 1 ಸಮುವೇಲ 8:10–18, ಆಮೋಸ 5:10–15, ಮೀಕ 6:8 ಆದಿಕಾಂಡ 19:1–13, ಯೆಹೆಜ್ಕೇಲನು 16–49, ಯೆಶಾಯ 1:15–23

**ಸ್ಮರಣ ವಾಕ್ಯ : " ಮನುಷ್ಯನೇ, ಒಳ್ಳೆಯದು ಇಂಥದ್ದೇ ಎಂದು ಯೆಹೋವನು ನಿನಗೆ ತೋರಿಸಿದ್ದಾನಷ್ಟೆ ; ನ್ಯಾಯವನ್ನು ಆಚರಿಸುವುದು, ಕರುಣೆಯಲ್ಲಿ ಆಸಕ್ತನಾಗಿರುವುದು, ನಿನ್ನ ದೇವರಿಗೆ ನಮ್ರವಾಗಿ ನಡೆದುಕೊಳ್ಳುವುದು, ಇಷ್ಟನ್ನೇ ಹೊರತು ಯೆಹೋವನು ನಿನ್ನಿಂದ ಇನ್ನೇನು ಅಪೇಕ್ಷಿಸುವನು?** (ಮೀಕ 6:8)

ಹಳೆಯ ಒಡಂಬಡಿಕೆಯ ಪ್ರವಾದಿಗಳು ಸತ್ಯವೇದದ ಅಂತ್ಯದ ಆಸಕ್ತಿದಾಯಕ ಪಾತ್ರಗಳಲ್ಲಿ ಸೇರಿದ್ದಾರೆ. ಅವರ ಗಟ್ಟಿಯಾದ ಧ್ವನಿಗಳು, ಅವರ ಕೆಚ್ಚೆದೆಯ ಸಂದೇಶಗಳು, ಅವರ ದುಃಖ, ಕೋಪ ಮತ್ತು ಆಕ್ರೋಶ, ಹಾಗು ಅವರ ಸಂದೇಶಗಳ ಸಾಂದರ್ಭಿಕ ಪ್ರದರ್ಶನಗಳು, ಯಾವಾಗಲೂ ಅವರ ಸುತ್ತಲೂ ಇರುವುದಕ್ಕೆ ಆರಾಮದಾಯಕವಲ್ಲದಿದ್ದರೂ ಸಹ, ಅವರನ್ನು ಯಾವಾಗಲೂ ನಿರ್ಲಕ್ಷಿಸಲಾಗದ ಜನರನ್ನಾಗಿ ಮಾಡಿದೆ.

ಆರಿಸಲ್ಪಟ್ಟ ಜನರು ತಮ್ಮ ದೇವರ ಕರೆಯುವಿಕೆಗೆ ಹಿಂತಿರುಗಿ ಬರುವುದಕ್ಕೆ ಎಚ್ಚರಿಸಲು (ಸನ್ನೆ ಮಾಡಲು) ಅವರನ್ನು ಮುಖ್ಯವಾಗಿ ಇಸ್ರಾಯೇಲ್ ಮತ್ತು ಯುದಾಯಕ್ಕೆ ಕಳುಹಿಸಲಾಯಿತು. ಜನರು ಮತ್ತು ಅವರ ನಾಯಕರು ಸುತ್ತಲಿನ ರಾಷ್ಟ್ರಗಳ ವಿಗ್ರಹ ಮತ್ತು ಜೀವನ ಶೈಲಿಗಳಿಂದ ನಡೆಸಲ್ಪಟ್ಟರು. ಪಶ್ಚಾತ್ತಾಪಪಡಲು ಅವರನ್ನು ಪ್ರಚೋದಿಸುವುದು ಪ್ರವಾದಿಗಳ ಅಬಿನಂದನೀಯುವಲ್ಲದ ಕಾರ್ಯವಾಗಿತ್ತು, ಕೆಲವೊಮ್ಮೆ ಅವರಿಗೆ ದೇವರ ಪ್ರೀತಿ ಮತ್ತು ಅವರ ಪರವಾಗಿ

ಹಿಂದಿನ ಕ್ರಿಯೆಯನ್ನು ನೆನಪಿಸುವ ಮೂಲಕ ಮತ್ತು ಕೆಲವೊಮ್ಮೆ ಅವರು ದೇವರಿಂದ ದೂರ ಹೋಗುತ್ತಿದ್ದರೆ ಅದರ ಪರಿಣಾಮಗಳನ್ನು ಎಚ್ಚರಿಸುತ್ತಿದ್ದರು.

ನಾವು ನೋಡುವಂತೆಯೇ, ನಾಯಕರ ಮತ್ತು ಜನರ ನಡುವಿನ ಪಾಪಗಳ ಮತ್ತು ದುಷ್ಟತನಗಳ ವಿರುದ್ಧವಾಗಿ ಅವರು ಎಚ್ಚರಿಸಿದರು. ಅವರ ನಡುವೆ ಇದ್ದ ಒಡವರ, ನಿರ್ಗತಿಕರ ಮತ್ತು ಅಸಹಾಯಕರಾಗಿದ್ದವರನ್ನು ತುಳಿಯುವುದು ಅತಿ ದೊಡ್ಡ ಪಾಪಗಳಲ್ಲಿ ಒಂದಾಗಿತ್ತು. ಹೌದು, ವಿಗ್ರಹಗಳನ್ನು ಪೂಜಿಸುವುದು ಕೆಟ್ಟದು, ಹೌದು ಸುಳ್ಳು ಧಾರ್ಮಿಕ ಪದ್ಧತಿಗಳನ್ನು ಅನುಸರಿಸುವುದು ಕೆಟ್ಟದ್ದಾಗಿತ್ತು. ಆದರೆ, ಹೌದು, ಬಡವರು ಮತ್ತು ದುರ್ಬಲರ ಮೇಲೆ ಅನುಕೂಲ ಪಡೆದುಕೊಳ್ಳುವದು ಕೂಡಾ ಖಂಡನೆಗೆ ಯೋಗ್ಯವಾಗಿತ್ತು.

**ಭಾನುವಾರ** **ಜುಲೈ 28**

## ನ್ಯಾಯಕ್ಕೆ ಮರಳಿಸುವ ಕರೆ

ಇಸ್ರಾಯೇಲ್ ರಾಷ್ಟ್ರಕ್ಕಾಗಿ ದೇವರು ಸ್ಪಷ್ಟವಾಗಿ ವಿವರಿಸಲಾದ ಯೋಜನೆ ಇದ್ದರೂ, ಇಸ್ರಾಯೇಲ್ ಜನರು ಅವರ ಕರೆಯುವಿಕೆಗೆ ವಿರಳವಾಗಿ ಜೀವಿಸುತ್ತಿದ್ದರು. ಅವರು ಭೂಮಿಯಲ್ಲಿ ಸ್ಥಾಪಿಸಲ್ಪಟ್ಟ ಕೆಲವೇ ಜನಾಂಗಗಳ ನಂತರ, ಬೇರೆ ಎಲ್ಲಾ ಜನಾಂಗಗಳಿರುವಂತೆ (1 ಸಮುವೇಲ 8:5) ತಮ್ಮ ದೇಶವನ್ನು ಮುನ್ನಡೆಸಲು ಒಬ್ಬ ಅರಸನನ್ನು ನೇಮಿಸು ಎಂದು ಪ್ರವಾದಿ ಮತ್ತು ನ್ಯಾಯಸ್ಥಾಪಕನು ಆದ ಸಮುವೇಲನನ್ನು ಕೇಳಿದರು.

1 ಸಮುವೇಲನು 8:10–18 ಓದಿ. ಅವರು ಅರಸನಿಗಾಗಿ ಮಾಡಿದ ಮನವಿಗೆ ಪ್ರತಿಕ್ರಿಯೆಯಾಗಿ ಜನರಿಗೆ ಸಮುವೇಲನು ಯಾವ ಎಚ್ಚರಿಕೆ ನೀಡಿದನು?

ಇದು ಸಹ, ಇತರ ರಾಷ್ಟ್ರಗಳಂತೆ ಆಗುವ ಕಡೆಗೆ ಒಂದು ಹೆಜ್ಜೆ ಹಾಕಿದೆಯೆಂದು ಸಮುವೇಲನು ಗುರುತಿಸಿದನು. ಆತನ ಪ್ರವಾದನೆ ವಾಸ್ತವ ಆಗುವ ಮುಂಚೆಯೇ ಸಮುವೇಲನು ಮೊದಲ ಅರಸನಾದ ಸೌಲನಿಗೆ ಸಲಹೆ ನೀಡಲು ಪ್ರಯತ್ನಿಸಿದನು. ದಾವೀದ ಮತ್ತು ಸೊಲೊಮೋನನು ಇಸ್ರಾಯೇಲ್ ಸಾಮ್ರಾಜ್ಯದ ಉನ್ನತ ಸ್ಥಾನದಲ್ಲಿ ಇದ್ದಾಗ್ಯೂ ಶೋಧನೆಗಳು, ಭ್ರಷ್ಟಾಚಾರ ಮತ್ತು ಮಿತಿಮೀರಿದ ಅವರ ಶಕ್ತಿಯನ್ನು ತಪ್ಪಿಸಿಕೊಳ್ಳಲಾಗಲಿಲ್ಲ.

ಇಸ್ರಾಯೇಲ್ ಮತ್ತು ಯೆಹೂದ ಅರಸರ ಆಳ್ವಿಕೆಯ ಉದ್ದಕ್ಕೂ, ಸಮಂಜಸವಾಗಿ ಬದುಕಲು ಮತ್ತು ಸಮಾಜದಲ್ಲಿ ನ್ಯಾಯವನ್ನು ಆಚರಿಸಲು ಮುಂದುವರೆಯುವ ಮತ್ತು ಮರುಕಳಿಸುವ ಕರೆಯನ್ನು ನಾವು ನೋಡುತ್ತೇವೆ. ಇಸ್ರಾಯೇಲ್ ಮತ್ತು ಅದರ ಮುಖಂಡರ ವಿಶ್ವಾಸದ್ರೋಹವನ್ನು, ಪ್ರವಾದಿಗಳು ನಿರಂತರವಾಗಿ ಮತ್ತು ತುರ್ತಾಗಿ ಧ್ವನಿಯಿಲ್ಲದವರಿಗಾಗಿ ಧ್ವನಿಗೂಡಿಸುತ್ತಾ, ಅದರಲ್ಲೂ ನಿರ್ದಿಷ್ಟವಾಗಿ ದೇವರ ಚಿತ್ತವನ್ನು ಅನುಸರಿಸಲು ಇಸ್ರಾಯೇಲ್ಯರ ವಿಫಲತೆಯಿಂದ ಗಾಯಗೊಂಡವರಾಗಿ ಎದುರಿಸುತ್ತಿದ್ದರು.

ಹಳೆಯ ಒಡಂಬಡಿಕೆ ಪ್ರವಾದಿಗಳ ಭಾವೋದ್ರೇಕವನ್ನು ಪ್ರತಿಬಿಂಬಿಸುವುದು, ಅಬ್ರಹಾಮ್ ಜೋಶುವಾ ಹೆಸ್ಚೆಲ್‌ರವರು, ನ್ಯಾಯಕ್ಕಾಗಿ ತುರ್ತು ಕರೆಗಳ ಜೊತೆಗೆ ಅವರ ದೌರ್ಜನ್ಯವನ್ನು ವಿರೋಧಿಸುತ್ತಾರೆ : "ಪ್ರವಾದಿಗಳು ಭಯಪಡಿಸಿದ ವಿಷಯಗಳು ಈಗಲೂ ಸಹ ಪ್ರಪಂಚದಾದ್ಯಂತ ದಿನನಿತ್ಯದ ಘಟನೆಗಳಾಗಿವೆ... ಅನ್ಯಾಯದೊಂದಿಗೆ ಅವರ ಸಹಿಸಲಾಗದ ಅಸಹನೆ ನಮಗೆ ಉನ್ಮಾದ (ಹಿಸ್ಟೇರಿಯಾ) ದಂತೆ ಒಡಿಯಬಹುದು. ನಮಗೆ ನಾವೇ ನಿರಂತರವಾಗಿ ಅನ್ಯಾಯದ ಕೃತ್ಯ, ಆಷಾಢಭೂತಿತನ, ಸುಳ್ಳುತನ, ಆಕ್ರೋಶ, ದುಃಖಕ್ಕೆ ಸಾಕ್ಷಿಯಾಗಿದ್ದೇವೆ. ಆದರೆ ನಾವು ವಿರಳವಾಗಿ ಹುರುಪಿನಿಂದ ಬೆಳೆಯುತ್ತೇವೆ ಅಥವಾ ಅತಿಯಾಗಿ ಉತ್ಸುಕರಾಗುತ್ತೇವೆ. ಪ್ರವಾದಿಗಳಿಗೆ ಆಗುವ ಅಲ್ಪ ಅನ್ಯಾಯವು ಕೂಡಾ ಜಗತ್ತಿನ ಪ್ರಮಾಣವನ್ನು ಊಹಿಸುತ್ತದೆ" – ದಿ ಪ್ರಾಪೆಟ್ಸ್ ನ್ಯೂಯಾರ್ಕ್ : ಜೂವಿಶ್ ಪಬ್ಲಿಕೇಷನ್ ಸೊಸೈಟಿ ಆಫ್ ಅಮೇರಿಕಾ 1962) ಪುಟಗಳು 3,4.

ಈ ಪ್ರವಾದಿಗಳು ನಮಗೆ ಏನು ಕೊಡುತ್ತಾರೆಂದರೆ ದೇವರ ಹೃದಯ ಮತ್ತು ಮನಸ್ಸಿನೊಳಗಿನ ಒಂದು ಒಳನೋಟ. ದೇವರ ಪರವಾಗಿ ಮಾತನಾಡುವಾಗ, ದೇವರ ಕಣ್ಣೀರು ತುಂಬಿದ ಕಣ್ಣುಗಳ ಮೂಲಕ ನಮ್ಮ ಪ್ರಪಂಚದ ಅನ್ಯಾಯ ಮತ್ತು ನೋವನ್ನು ನೋಡುವಂತೆ ಅವರು ನಮಗೆ ಸಹಾಯ ಮಾಡಬಹುದು. ಆದರೆ ಈ ಭಾವೋದ್ರೇಕವು ನಮ್ಮ ಸುತ್ತಲಿರುವವರ ದಬ್ಬಾಳಿಕೆಯನ್ನು ಮತ್ತು ದುಃಖವನ್ನು ನಿವಾರಿಸಲು ಮತ್ತು ಪರಿಹರಿಸಲು ದೇವರೊಂದಿಗೆ ಕೆಲಸ ಮಾಡುವ ಕ್ರಿಯೆಯ ಕರೆಯಾಗಿದೆ.

**ನಮಗೆ ಮತ್ತು ಇತರರಿಗೆ ಹಾನಿ ಉಂಟಾಗಬಹುದಾದ ವಿಧಾನಗಳಲ್ಲಿ "ಎಲ್ಲಾ ಇತರ ರಾಷ್ಟ್ರಗಳ" ಹಾಗೆ ಇರಲು ನಾವು ಕೆಲವೊಮ್ಮೆ ಹೇಗೆ ಹುಡುಕುತ್ತೇವೆ?**

**ಸೋಮವಾರ ಆಮೋಸ ಜುಲೈ 29**

"ನಾನು ಪ್ರವಾದಿಯಲ್ಲ, ಪ್ರವಾದಿ ಮಂಡಲಿಗೆ ಸೇರಿದವನೂ ಅಲ್ಲ, ನಾನು ಗೊಲ್ಲನು, ಅತಿಹಣ್ಣು ಕೀಳುವವನು; ಯೆಹೋವನು ನನ್ನನ್ನು ಮಂದೆ ಕಾಯುವದರಿಂದ ತಪ್ಪಿಸಿ 'ನೀನು ಹೋಗಿ ನನ್ನ ಜನರಾದ ಇಸ್ರಾಯೇಲ್ಯರಿಗೆ ಪ್ರವಾದನೆ ಮಾಡು' ಎಂದು ನನಗೆ ಅಪ್ಪಣೆ ಕೊಟ್ಟನು" (ಆಮೋಸ 7:14,15).

ಆಮೋಸನು ಪ್ರವಾದಿಯಾಗುವ ತನ್ನ ಅರ್ಹತೆಗಳ ಕೊರತೆಯನ್ನು ಒಪ್ಪಿಕೊಳ್ಳುವಲ್ಲಿ ಸಾಕಷ್ಟು ಮುಕ್ತವಾಗಿರುತ್ತಾನೆ, ಆದರೆ ಅವನು ತನ್ನ ಸಂದೇಶವನ್ನು ಇಸ್ರಾಯೇಲ್ ರಾಷ್ಟ್ರಕ್ಕೆ ಪ್ರಸ್ತುತ ಪಡಿಸಿದಂತೆ, ಅವನು ತನ್ನ ಕೇಳುಗರಿಗೆ ಏನು ಹೇಳಲು ಬಯಸಿದ್ದನೋ ಅದಕ್ಕೆ ಅವರನ್ನು ಸೆಳೆಯುವುದರಲ್ಲಿ ಒಂದು ಸ್ಪಷ್ಟವಾದ ಸಾಮರ್ಥ್ಯವನ್ನು ತೋರಿಸಿದನು.

ಸುತ್ತಲಿನ ರಾಷ್ಟ್ರಗಳಾದ ಸಿರಿಯಾ, ಫಿಲಿಷ್ಟಿಯಾ, ಫೊನೀಷಿಯಾ, ಎದೋಮ್, ಅಮ್ಮೋನ್ ಮತ್ತು ಮೋವಾಬ್‌ಗಳನ್ನು ಪಟ್ಟಿ ಮಾಡುವುದು ಮತ್ತು ಅದರ ಅಪರಾಧ, ಬಲಾತ್ಕಾರ ಮತ್ತು ದೌರ್ಜನ್ಯಗಳಿಗೆ ಅವುಗಳನ್ನು ದೇವರು ಶಿಕ್ಷಿಸುತ್ತಾನೆ ಎಂಬ ಜನಪ್ರಿಯ ಸೂಚನೆಯ ಮೇಲೆ ಅವನು ಪ್ರಾರಂಭಿಸುತ್ತಾನೆ (ಆಮೋಸ 1:3–2:3). ಇಸ್ರಾಯೇಲ್ಯರು ತಮ ವೈರಿಗಳ ಈ ದೋಷಾರೋಪಣೆಯನ್ನು ಶ್ಲಾಘಿಸುವುದನ್ನು ಕಲ್ಪಿಸುವುದು ಸುಲಭ, ಅದರಲ್ಲೂ ನಿರ್ದಿಷ್ಟವಾಗಿ ಈ ದೇಶಗಳ ಹಲವು ಅಪರಾಧಗಳು ಇಸ್ರಾಯೇಲ್ಯರು ತಮಗೆ ವಿರುದ್ಧವಾಗಿಯೇ ನಿರ್ದೇಶಿಸಿದ್ದರು.

ನಂತರ ಆಮೋಸನು ಮನೆಗೆ ಸ್ವಲ್ಪ ಹತ್ತಿರವಾಗಿ ಹೋಗುತ್ತಾನೆ, ಇಸ್ರಾಯೇಲಿನ ದಕ್ಷಿಣದ ನೆರೆ ಹೊರೆಯವರು ಈ ಪ್ರತ್ಯೇಕಿಸಲ್ಪಟ್ಟ ಸಾಮ್ರಾಜ್ಯಗಳಲ್ಲಿ ಒಂದಾದ ಯೆಹೋವನ ಜನರ ವಿರುದ್ಧವಾಗಿ ದೇವರ ತೀರ್ಪನ್ನು ಘೋಷಿಸುತ್ತಾನೆ. ದೇವರ ಪರವಾಗಿ ಮಾತನಾಡುತ್ತಾ, ದೇವರನ್ನು ಅವರು ತಿರಸ್ಕರಿಸಿದ್ದನ್ನು, ಆತನ ಆಜ್ಞೆಗಳಿಗೆ ಅವರ ಅವಿಧೇಯತೆಯನ್ನು ಮತ್ತು ಅವರಿಗೆ ಬರುವ

ಶಿಕ್ಷೆಗಳನ್ನು ಆಮೋಸನು ಉಲ್ಲೇಖಿಸಿದ್ದಾನೆ (ಆಮೋಸ 2:4,5 ನೋಡಿ). ಮತ್ತೊಮ್ಮೆ ಉತ್ತರ ಸಾಮ್ರಾಜ್ಯದಲ್ಲಿರುವ ಜನರು ಅವರ ಸುತ್ತಲಿರುವವರ ತಪ್ಪುಗಳನ್ನು ಗುರುತಿಸುತ್ತಿದ್ದಂತೆ ಆಮೋಸನನ್ನು ಶ್ಲಾಘಿಸಿದರೆಂದು ನಾವು ಊಹಿಸಬಹುದು.

ಅದಾದ ನಂತರ ಆಮೋಸನು ತನ್ನ ಪ್ರೇಕ್ಷಕರ ಕಡೆಗೆ ತಿರುಗುತ್ತಾನೆ. ಉಳಿದ ಪುಸ್ತಕದ ಭಾಗವು ಇಸ್ರಾಯೇಲಿನ ದುಷ್ಟತನ, ವಿಗ್ರಹಾರಾಧನೆ, ಅನ್ಯಾಯ ಮತ್ತು ದೇವರ ದೃಷ್ಟಿಯಲ್ಲಿ ಪುನರಾವರ್ತಿತ ವೈಫಲ್ಯಗಳನ್ನು ಕೇಂದ್ರೀಕರಿಸುತ್ತದೆ.

ಆಮೋಸ 3:9–11; 4:1,2; 5:10–15; ಮತ್ತು 8:4–6 ಓದಿ. ಆತನು ಯಾವ ಪಾಪಗಳಿಗೆ ವಿರುದ್ಧವಾಗಿ ಎಚ್ಚರಿಸುತ್ತಿದ್ದಾನೆ?

ಹಾಗೆಯೇ ಆಮೋಸನು ತನ್ನ ಭಾಷೆಯಲ್ಲಿ ರಾಜತಾಂತ್ರಿಕವಾಗಿರಲಿಲ್ಲ ಮತ್ತು ಆತನ ಎಚ್ಚರಿಕೆಗಳು ಕಾಯಿದೆಗಳಾಗಿದ್ದವು. ಅವನ ಸಂದೇಶವು ಅವರನ್ನು ದೇವರ ಕಡೆಗೆ ತಿರುಗಿಕೊಳ್ಳುವುದಕ್ಕೆ ವಿನಮ್ರ ಮನವಿಯೊಂದಿಗೆ ಕೂಡಿತ್ತು. ಅವರ ನ್ಯಾಯದ ಅರ್ಥದ ನವೀಕರಣ ಮತ್ತು ಅವರ ಮಧ್ಯದಲ್ಲಿರುವ ಬಡವರಿಗೆ ಕಾಳಜಿ ವಹಿಸುವದನ್ನು ಇದು ಒಳಗೊಂಡಿತು. "ನ್ಯಾಯವು ಹೊಳೆಯ ಹಾಗೆ ಹರಿಯಲಿ, ಧರ್ಮವು ಮಹಾನದಿಯಂತೆ ಪ್ರವಹಿಸಲಿ" (ಆಮೋಸ 5:24). ಕೊನೆಯ ಕೆಲವು ವಚನಗಳು ದೇವಜನರ ಮುಂದಣ ಸೌಭಾಗ್ಯವನ್ನು ಕುರಿತು ಗಮನ ಸೆಳೆಯುತ್ತದೆ (ಆಮೋಸ 9:11–15 ನೋಡಿ). "ಅವರ ಆಳವಾದ ಧರ್ಮಭ್ರಷ್ಟತೆ ಮತ್ತು ದೊಡ್ಡ ಅಗತ್ಯದ ಸಂದರ್ಭದಲ್ಲಿ ಅವರಿಗೆ ದೇವರ ಸಂದೇಶವು ಕ್ಷಮೆ ಮತ್ತು ಭರವಸೆಯಾಗಿತ್ತು" – ಎಲೆನ್ ಜಿ ವೈಟ್‌ರವರ ಪ್ರಾಫೆಟ್ಸ್ ಆಂಡ್ ಕಿಂಗ್ಸ್, ಪುಟ 283.

ನಾವು ತಪ್ಪುಗಳನ್ನು ಸರಿಪಡಿಸಲು ಕಠಿಣವಾಗಿ ಮಾತನಾಡಲು ಸಿದ್ಧವಾಗಬೇಕಾದ ಸಮಯಗಳಿವೆಯೇ? ಇಂತಹ ಭಾಷೆ ಸೂಕ್ತವಾಗಿದ್ದಾಗ ನಾವು ಹೇಗೆ ಗ್ರಹಿಸಬಲ್ಲೆವು?

**ಮಂಗಳವಾರ** **ಜುಲೈ 30**

# ಮೀಕ

ಮನುಷ್ಯನೇ, ಒಳ್ಳೆಯದು ಇಂಥದೇ ಎಂದು ಯೆಹೋವನು ನಿನಗೆ ತೋರಿಸಿದ್ದಾನಷ್ಟೆ; ನ್ಯಾಯವನ್ನು ಆಚರಿಸುವುದು, ಕರುಣೆಯಲ್ಲಿ ಆಸಕ್ತನಾಗಿರುವದು, ನಿನ್ನ ದೇವರಿಗೆ ನಮ್ರವಾಗಿ ನಡೆದುಕೊಳ್ಳುವದು?" (ಮೀಕ 6:8). ನೀವು ಈ ವಾಕ್ಯಗಳಂತೆ ಜೀವಿಸಲು ಈಗ ಯಾವ ಮಾರ್ಗಗಳಿರಬಹುದು?

ಬಹುಶಃ ಮೀಕ 6:8 ಧರ್ಮಶಾಸ್ತ್ರದಲ್ಲಿ ಅತ್ಯುತ್ತಮವಾದ ವಚನಗಳಲ್ಲಿ ಒಂದಾಗಿದೆ. ಆದರೂ, ನಾವು ಅನೇಕ ವಾಕ್ಯಗಳನ್ನು ಘೋಷಣೆಗಳನ್ನು ಅಥವಾ ಪ್ರಕಟಣ ಪತ್ರಿಕೆ (ಪೋಸ್ಟರ್)ಗಳಾಗಿ ಮಾಡಲು ಇಷ್ಟಪಡುತ್ತೇವೆ, ಬಹುಶಃ ನಾವು ವಾಕ್ಯದ ಸನ್ನಿವೇಶದೊಂದಿಗೆ ಕಡಿಮೆ ಪರಿಚಿತರಾಗಿದ್ದೇವೆ ಎಂದು ನಾವು ಒಪ್ಪಿಕೊಳ್ಳಬಹುದು.

**ಮೀಕ 2:8–11 ಮತ್ತು 3:8–12 ಓದಿ. ಮೀಕ ಖಂಡಿಸುವುದಕ್ಕೆ ಆ ಜನರು ಏನು ಮಾಡುತ್ತಿದ್ದರು?**

ಯೆಹೂದದ ಅರಸನಾಗಿ ಆಹಾಜನ ಆಳ್ವಿಕೆಯಲ್ಲಿ ದೇವರ ಜನರು ತಮ್ಮ ರಾಷ್ಟ್ರದ ಇತಿಹಾಸ ಮತ್ತು ಆಧ್ಯಾತ್ಮಿಕತೆಯಲ್ಲಿ ಒಂದು ಹೊಸ ಅವನತಿಯನ್ನು ತಲುಪಿದರು. ವಿಗ್ರಹಾರಾಧನೆ ಮತ್ತು ಅದರ ಹಲವಾರು ಕೆಟ್ಟ ಅಭ್ಯಾಸಗಳು ಹೆಚ್ಚಾದವು. ಅದೇ ಸಮಯದಲ್ಲಿ, ಆ ಸಮಯದ ಇತರ ಪ್ರವಾದಿಗಳೂ ಸಹ ಗಮನಿಸಿದಂತೆ, ಬಡವರ ಮೇಲೆ ಶೋಷಣೆ ಮತ್ತು ಬೇಟೆಯಾಡುವುದನ್ನು ಮುಂದುವರೆಸಿದರು.

ತನ್ನ ಸಮಕಾಲೀನವರಿಗಿಂತ ಮೀಕನು ಅಧಃಪತನ ಪ್ರವಾದಿಯಾಗಿರಲಿಲ್ಲ. ಅವನ ಮೊದಲ ಮೂರು ಅಧ್ಯಾಯಗಳು ಹೆಚ್ಚಾಗಿ, ಆತನ ಜನರು ಮಾಡಿದ್ದ ದುಷ್ಟತನಕ್ಕೆ ದೇವರ ಕೋಪ ಮತ್ತು ದುಃಖ ಹಾಗೆಯೇ ಅವರ ದಾರಿಯಲ್ಲಿ ಬರುವ ವಿನಾಶವನ್ನು ವ್ಯಕ್ತಪಡಿಸುತ್ತದೆ.

ಆದರೆ ದೇವರು ತನ್ನ ಜನರನ್ನು ಬಿಟ್ಟು ಕೊಡಲಿಲ್ಲ. ಆದಾಗ್ಯೂ ಪ್ರವಾದಿಗಳ ಗಟ್ಟಿಯಾದ ಧ್ವನಿ ಮತ್ತು ಕಠಿಣ ಸಂದೇಶಗಳು ಆತನ ಜನರ ಮೇಲೆ ದೇವರ

ನಿರಂತರ ಆಸಕ್ತಿಯ ಸಂಕೇತವಾಗಿತ್ತು. ಅವರ ಮೇಲಿದ್ದ ಪ್ರೀತಿ ಮತ್ತು ಕಾಳಜಿಯ ಕಾರಣ ಆತನು ಅವರಿಗೆ ಎಚ್ಚರಿಕೆಯನ್ನು ನೀಡಿದನು. ಆತನು ಅವರನ್ನು ಕ್ಷಮಿಸಲು ಮತ್ತು ಪುನಃ ಸ್ಥಾಪಿಸಲು ಆಶಿಸಿದನು. ಆತನು ಶಾಶ್ವತವಾಗಿ ಕೋಪದಿಂದ ಇರಲಿಲ್ಲ (ಮೀಕ 7:18–20 ನೋಡಿ).

ನ್ಯಾಯವನ್ನು ಆಚರಿಸುವುದು, ಕರುಣೆಯಲ್ಲಿ ಆಸಕ್ತನಾಗಿರುವುದು ಮತ್ತು ನಮ್ರವಾಗಿ ನಡೆದುಕೊಳ್ಳುವದೇ ಸುಪ್ರಸಿದ್ಧ "ಸೂತ್ರ"ದ ಸನ್ನಿವೇಶವಾಗಿದೆ. ಇದು ಸರಳವಾಗಿ ತೋರಬಹುದು. ಆದರೆ ಪ್ರಾಯೋಗಿಕ ವಿಧಗಳಲ್ಲಿ ಅಂತಹ ನಂಬಿಕೆಯಲ್ಲಿ ಬದುಕುವುದು ಹೆಚ್ಚಿನ ಸವಾಲಿನದು, ವಿಶೇಷವಾಗಿ ಹಾಗೇ ಮಾಡುವಾಗ ಸುತ್ತಮುತ್ತಲಿನ ಸಮಾಜದ ಹೊರಗೆ ಹೆಜ್ಜೆಯಿಟ್ಟಂತೆ ತೋರುತ್ತದೆ. ಇತರರು ಅನ್ಯಾಯದಿಂದ ಲಾಭವನ್ನು ಪಡೆಯುವಾಗ, ಕರುಣೆಯಿಂದ ಹೆದರಿ ಮತ್ತು ಹೆಮ್ಮೆಯಿಂದ ಸವಾರಿ ಮಾಡಿ, ನ್ಯಾಯವಾಗಿ ವರ್ತಿಸಿ, ಕರುಣೆಯನ್ನು ಪ್ರೀತಿಸಿ, ನಮ್ರವಾಗಿ ನಡೆದುಕೊಳ್ಳುವುದಕ್ಕೆ ಧೈರ್ಯ ಮತ್ತು ಪರಿಶ್ರಮದ ಅಗತ್ಯವಿದೆ. ಆದರೂ ಇದನ್ನು ನಾವು ಒಂಟಿಯಾಗಿ ಮಾಡಲಾಗುವುದಿಲ್ಲ; ನಾವು ಈ ರೀತಿಯಾಗಿ ವರ್ತಿಸಿದರೆ, ನಾವು ನಮ್ಮ ದೇವರೊಂದಿಗೆ ನಡೆಯುವಂತವರಾಗಿದ್ದೇವೆ.

**ನ್ಯಾಯವನ್ನು ಆಚರಿಸುವದು, ಕರುಣೆಯಲ್ಲಿ ಆಸಕ್ತನಾಗಿರುವದು, ಮತ್ತು ದೇವರ ಮುಂದೆ ನಮ್ರವಾಗಿ ನಡೆಯುವುದರ ನಡುವೆ ಇರುವ ಸಂಬಂಧ ಏನು?**

**ಬುಧವಾರ** **ಜುಲೈ 31**

## ಯೆಹೆಜ್ಕೇಲನು

ನಾವು "ಸೊದೋಮ್ ಪಾಪಗಳ" ಬಗ್ಗೆ ಒಂದು ಕ್ರೈಸ್ತರ ಗುಂಪನ್ನು ಕೇಳಬೇಕಾದರೆ, ಅನೇಕರು ಅದರ ಹಲವಾರು ಲೈಂಗಿಕ ಪಾಪಗಳ ಮತ್ತು ಇತರ ಸ್ವರೂಪಗಳ ವಿವರಣೆಯನ್ನು ಪ್ರಾರಂಭಿಸುವ ಸಾಧ್ಯತೆಯಿದೆ. ಎಲ್ಲದರ ನಂತರ, ಆದಿಕಾಂಡ 19:1–13 ವಿನಾಶಕ್ಕಾಗಿ ಮಾಗಿದಕ್ಕಿಂತಲೂ ಹೆಚ್ಚಾಗಿ ಒಂದು ರೋಗಗ್ರಸ್ತ ಮತ್ತು ದಾರಿತಪ್ಪಿದ ಸಮಾಜವನ್ನು ಚಿತ್ರಿಸುತ್ತದೆ.

ಕುತೂಹಲಕರ ವಿಷಯವೆಂದರೆ, ಉತ್ತರವು ಹೆಚ್ಚು ಜಟಿಲವಾಗಿದೆ. ಯೆಹೆಜ್ಕೇಲನ ವಿವರಣೆಯನ್ನು ಪರಿಗಣಿಸಿ : "ಸೊದೋಮಿಗೆ ನಿನ್ನ ತಂಗಿಯ

ದೋಷವನ್ನು ನೋಡು; ಹೆಚ್ಚಳಪಡುವದು, ಹೊಟ್ಟೆ ತುಂಬಿಸಿಕೊಳ್ಳುವದು, ಸ್ವಸುಖದಲ್ಲಿ ಮುಳುಗಿರುವದು, ಇವು ಆಕೆಯಲ್ಲಿಯೂ ಆಕೆಯ ಕುಮಾರ್ತೆಯರಲ್ಲಿಯೂ ಇದ್ದವು. ಅಲ್ಲದೆ ಆಕೆಯು ದೀನದರಿದ್ರರಿಗೆ ಬೆಂಬಲವಾಗಿರಲಿಲ್ಲ" (ಯೆಹೆಜ್ಕೇಲನು 16:49). ನಗರದಲ್ಲಿ ಕಾಣುವ ಇತರ ವಿಧದ ದುಷ್ಕೃತ್ಯವನ್ನು ಕರ್ತನು ಕಡೆಗಣಿಸುವುದಿಲ್ಲವಾದರೂ, ಇಲ್ಲಿ ಯೆಹೆಜ್ಕೇಲನ ಗಮನವು ಆರ್ಥಿಕ ಅನ್ಯಾಯ ಮತ್ತು ಅಗತ್ಯದಲ್ಲಿರುವವರಿಗೆ ಆರೈಕೆಯ ಕೊರತೆಯ ಮೇಲಿದೆ.

**ದೇವರ ದೃಷ್ಟಿಯಲ್ಲಿ ಈ ಆರ್ಥಿಕ ಪಾಪಗಳು ಲೈಂಗಿಕ ಪಾಪಗಳಿಗಿಂತ ಕೆಟ್ಟದ್ದಾಗಿರಬಹುದೇ?**

ಆಮೋಸ, ಮೀಕ ಮತ್ತು ಯೆಶಾಯನ ಸಮಯದ ನಂತರ ಬರುವ ಯೆಹೆಜ್ಕೇಲನ ಹಿಂದಿನ ಪ್ರವಾದನೆಗಳು ಮುಂಬರುವ ವಿನಾಶದ ಬಗ್ಗೆ ಒಂದೇ ರೀತಿಯ ಎಚ್ಚರಿಕೆಯನ್ನು ಧ್ವನಿಸುತ್ತದೆ. ಆದಾಗ್ಯೂ, ಯೆರೂಸಲೇಮ್ ಬಾಬೆಲಿನವರಿಗೆ ಸೋತ ನಂತರ, ಅದರ ಜನರನ್ನು ಸೆರೆ ಹಿಡಿಯಲಾಯಿತು, ಪುನಃ ಸ್ಥಾಪನೆಗಾಗಿ ದೇವರ ವಾಗ್ದಾನಗಳಿಗೆ ಯೆಹೆಜ್ಕೇಲನ ಗಮನವು ಹೆಚ್ಚಾಗಿ ಬದಲಾಗುತ್ತದೆ.

**ಯೆಹೆಜ್ಕೇಲನು 34:2–4, 7–16 ಓದಿ. ತನ್ನ ಸ್ವಂತ ಕುರುಬನೊಂದಿಗೆ ಇಸ್ರಾಯೇಲ್ಯರ ಭ್ರಷ್ಟ ನಾಯಕರ ಬಗ್ಗೆ ದೇವರ ಮೌಲ್ಯಮಾಪನವನ್ನು ಹೋಲಿಸಿ. ಅವರು ದುರ್ಬಲವಾದ "ಕುರಿ"ಯನ್ನು ಉಪಚರಿಸುವ ರೀತಿಯು ಆತನ ವಿಧಾನಗಳೊಂದಿಗೆ ಹೇಗೆ ವ್ಯತಿರಿಕ್ತವಾಗಿದೆ?**

ಸೊದೋಮಿಗೆ ಹೋಲಿಸಿದರೆ, ಅವರು ಇನ್ನಷ್ಟು ಕೆಟ್ಟವರಾಗಿದ್ದರು, ಆದರೂ ಸಹ, ಕರ್ತನು ಅವರನ್ನು ದುಷ್ಟತನದಿಂದ ತಿರುಗಿಸುವುದರ ಭರವಸೆಯಲ್ಲಿ ಅವರನ್ನು ತಲುಪುತ್ತಿದ್ದರು. ಆತನ ಜನರಿಗೆ ದೇವರು ನವೀಕರಿಸಿದ ಯೋಜನೆಯಲ್ಲಿ, ಅವರು ತಮ್ಮ ಭೂಮಿಗೆ ಹಿಂತಿರುಗಿದರು, ಯೆರೂಸಲೇಮ್ ಪುನಃಸ್ಥಾಪನೆಯಾಯಿತು ಮತ್ತು ದೇವಾಲಯವು ಪುನರ್ ನಿರ್ಮಿಸಲಾಯಿತು. ದೇವರು ನೀಡಿದ ಉತ್ಸವಗಳು ಮತ್ತೊಮ್ಮೆ ಆಚರಿಸಲ್ಪಡುತ್ತವೆ ಮತ್ತು ಭೂಮಿಯನ್ನು

ಅವರ ಸ್ವಾಸ್ತ್ಯದ ಪ್ರಕಾರ ಜನರ ಮಧ್ಯದಲ್ಲಿ ಸರಿ ಸಮಾನವಾಗಿ ಪಾಲು ಮಾಡಲಾಗಿದೆ (ಯೆಹೆಜ್ಕೇಲನು 47:13–48:29). ದೇವರ ಉದ್ದೇಶವು ಆತನ ಜನರಿಗೆ ಆತನ ಯೋಜನೆ ಎಂದು ಸ್ಪಷ್ಟವಾಗಿ ಕಾಣುತ್ತದೆ. ಮೊದಲು ಮೋಶೆಗೆ ಮತ್ತು ಇಸ್ರಾಯೇಲ್ ಜನರನ್ನು ಕಾಪಾಡಿದ ನಂತರ ಕೊಡಲಾಯಿತು, ಸೆರೆಯಿಂದ ಹಿಂತಿರುಗಿ ಬಂದ ಆತನ ಜನರೊಂದಿಗೆ ಮರುಪ್ರಾರಂಭಿಸಲಾಗಿತ್ತು ಎಂದು ಸ್ಪಷ್ಟವಾಗುತ್ತದೆ. ಇದು ಸಮಾಜದ ಬಲಹೀನ ಸದಸ್ಯರಿಗೆ ಮತ್ತು ಹೊರಗಿನವರು ಎಂದು ಪರಿಗಣಿಸಬಹುದಾದವರ ಬಗ್ಗೆ ಕಾಳಜಿಯನ್ನು ಒಳಗೊಂಡಿತ್ತು.

**ಹೆಚ್ಚಾಗಿ, ಆತನ ಜನರು ಉತ್ತಮವಾದ ಆಯ್ಕೆಗಳನ್ನು ಮಾಡುವ ಅವಕಾಶವನ್ನು ಹೊಂದಿದ್ದರೂ ಸಹ ತಪ್ಪು ಮಾಡಿದ್ದಾರೆ, ಆದಾಗ್ಯೂ ನಮ್ಮ ದೇವರು ಎರಡನೆಯ ಅವಕಾಶವನ್ನು ನೀಡುವ ದೇವರು ಎಂಬುದು ನಮಗೆ ಎಷ್ಟು ಮುಖ್ಯವಾಗಿದೆ.**

**ಗುರುವಾರ** **ಆಗಸ್ಟ್ 1**

## ಯೆಶಾಯ

**ಯೆಶಾಯ 1:15–23; 3:13–15; ಮತ್ತು 5:7,8 ಓದಿ. ಆತನ ಸುತ್ತಲಿನ ಸಮಾಜದಲ್ಲಿ ಅವನು ಗಮನಿಸಿದ ವಿಷಯಕ್ಕೆ ಪ್ರವಾದಿಯ ಪ್ರತಿಕ್ರಿಯೆಯನ್ನು ನೀವು ಹೇಗೆ ವಿವರಿಸುತ್ತೀರಿ?**

ಯೆಶಾಯನ ಆರಂಭಿಕ ಪ್ರಸಂಗದ, ಮೊದಲ ಐದು ಅಧ್ಯಾಯಗಳು ದೇವರ ಜನರ ಮಾರ್ಪಟ್ಟ ಸಮಾಜದ ರೀತಿಯ ಕಟು ಟೀಕೆಗಳ ಮಿಶ್ರಣವಾಗಿದ್ದು, ದೇವರನ್ನು ತಿರಸ್ಕರಿಸಿದಕ್ಕೆ ಮತ್ತು ಅವರ ತಪ್ಪುಗಳನ್ನು ಮುಂದುವರೆಸಿಕೊಂಡು ಹೋಗಿದಕ್ಕೆ ಪ್ರತಿಕ್ರಿಯೆಯಾಗಿ ಸನಿಹವಾದ ತೀರ್ಪಿನಲ್ಲಿ ಎಚ್ಚರಿಕೆಗಳನ್ನು ನೀಡಲಾಗಿದೆ ಮತ್ತು ಜನರು ದೇವರ ಕಡೆಗೆ ತಿರುಗಿಕೊಂಡು ತಮ್ಮ ಜೀವಿತ ಮತ್ತು ಸಮಾಜವನ್ನು ಸುಧಾರಿಸಿಕೊಂಡರೆ ಭರವಸೆಯನ್ನು ನೀಡಲಾಗಿದೆ. ಆದರೆ ಬಹುಶಃ ಬಲವಾದ ಮನಸ್ಸಿನ ದುಗುಡವು ಆತನ ವಾಕ್ಯಗಳ ಮೂಲಕ ಬರುವ ದುಃಖದ ಭಾವನೆಯಾಗಿದೆ. ದೇವರು ಯಾರು ಮತ್ತು ಅವನು ಆತನ ಜನರಿಗೆ ಏನು ಬಯಸುತ್ತಾನೆ ಎಂಬುದರ ಬಗ್ಗೆ ಆತನ ಅರ್ಥವನ್ನು ಆಧರಿಸಿ, ಪ್ರವಾದಿಯು ಕಳೆದು ಹೋದದದ್ದನ್ನು ಕುರಿತು ದುಃಖಿಸುತ್ತಾನೆ, ಲೆಕ್ಕವಿಲ್ಲದಷ್ಟು

ಮರೆಯಲ್ಪಟ್ಟ ಜನರು ಹಾನಿಗೊಳಗಾಗುತ್ತಾರೆ ಮತ್ತು ರಾಷ್ಟ್ರದ ಮೇಲೆ ತೀರ್ಪು ಬರುತ್ತದೆ.

ಯೆಶಾಯನು ತನ್ನ ಪ್ರವಾದನ ಸೇವೆಯನ್ನು ಈ ಮಾದರಿಯ ಮೂಲಕ ಮುಂದುವರೆಸಿದ್ದಾನೆ. ದೇವರು ಅವರಿಗೆ ಮಾಡಿದ್ದನ್ನು ನೆನಪಿಸಿಕೊಳ್ಳುವುದಕ್ಕೆ ಅವನು ಜನರನ್ನು ಬೇಡಿಕೊಳ್ಳುತ್ತಾನೆ. ದೇವರು ಭವಿಷ್ಯದಲ್ಲಿ ಈ ಜನರಿಗೆ ಏನು ಮಾಡಲು ಬಯಸಿದ್ದಾನೆ ಎಂಬ ಭರವಸೆಯನ್ನು ಸಹ ಅವನು ಕೊಡುತ್ತಾನೆ. ಹೀಗಾಗಿ, ಅವರು ಈಗ ದೇವರನ್ನು ಹುಡುಕಬೇಕಾಗಿದೆ, ಆತನೊಂದಿಗೆ ಈ ನವೀಕೃತ ಸಂಬಂಧವನ್ನು ಹೊಂದಲು ಅವರು ಪ್ರಸ್ತುತ ತಪ್ಪು ಕೆಲಸಗಳಿಗಾಗಿ ಪಶ್ಚಾತ್ತಾಪ ಪಡುವುದು ಮತ್ತು ಇತರ ಜನರನ್ನು ಅವರು ನೋಡಿಕೊಳ್ಳುವ ವಿಧಾನವನ್ನು ಬದಲಾಯಿಸಿಕೊಳ್ಳುವುದನ್ನು ಒಳಗೊಂಡಿತ್ತು.

ಅಧ್ಯಾಯಗಳು 58 ಮತ್ತು 59 ರಲ್ಲಿ ಯೆಶಾಯನು ನಿರ್ದಿಷ್ಟವಾಗಿ ನ್ಯಾಯದ ಕುರಿತು ಕಾಳಜಿ ವಹಿಸುತ್ತಾನೆ. ಅವನು ಮತ್ತೊಮ್ಮೆ "ನ್ಯಾಯವು ಹಿಂದಕ್ಕೆ ತಳ್ಳಲ್ಪಟ್ಟಿವೆ, ಧರ್ಮವು ದೂರದಲ್ಲಿ ನಿಂತಿದೆ, ಸತ್ಯವು ಚಾವಡಿಯಲ್ಲಿ ಬಿದ್ದು ಹೋಗಿದೆ, ಯಥಾರ್ಥವು ಪ್ರವೇಶಿಸಲಾರದು" (ಯೆಶಾಯ 59:14) ಎಂದು ಸಮಾಜವನ್ನು ವರ್ಣಿಸುತ್ತಾನೆ. ಆದರೆ ದೇವರು ಅದರ ಬಗ್ಗೆ ಅರಿತಿದ್ದಾನೆ ಎಂದು ಅವನು ದೃಢಪಡಿಸುತ್ತಾನೆ ಮತ್ತು ದೇವರು ಆತನ ಜನರನ್ನು ಕಾಪಾಡುತ್ತಾನೆ– ವಿಮೋಚಕನು ಬರುತ್ತಾನೆ" (ಯೆಶಾಯ 59:20).

ಯೆಶಾಯನ ಗ್ರಂಥದಾದ್ಯಂತ, ಪ್ರವಾದಿಯ ಗಮನದಲ್ಲಿ ಮೆಸ್ಸಿಯನ ಬರೋಣವನ್ನು ಸಾರುವದಕ್ಕೆ ಮಹತ್ವ ಭಾಗವನ್ನು ಕೊಡಲಾಗಿದೆ. ಅಂತಿಮವಾಗಿ ದೇವರ ಆಳ್ವಿಕೆಯಲ್ಲಿ ಭೂಮಿಯನ್ನು ಮರುಸ್ಥಾಪಿಸುವನು ಮತ್ತು ಆತನೊಂದಿಗೆ ನ್ಯಾಯ, ಕರುಣೆ, ಸ್ವಸ್ಥತೆ ಮತ್ತು ಮರುಸ್ಥಾಪನೆಯನ್ನು ತರುವನು.

**ಯೆಶಾಯ 9:6,7; 11:1–5; 42:1–7 ಮತ್ತು 53:4–6 ಓದಿ. ನೀವು ಅರ್ಥೈಸಿಕೊಂಡ ಯೇಸುವಿನ ಜೀವನ, ಸೇವೆ ಮತ್ತು ಮರಣದೊಂದಿಗೆ ಹೇಗೆ ಈ ಪ್ರವಾದನೆಗಳು ಹೊಂದಿಕೊಳ್ಳುತ್ತವೆ? ಆತನು ಈ ಲೋಕಕ್ಕೆ ಬರುವ ಉದ್ದೇಶದ ಬಗ್ಗೆ ಈ ಪ್ರವಾದನೆಗಳು ಏನು ಸೂಚಿಸುತ್ತದೆ?**

**ಶುಕ್ರವಾರ** **ಆಗಸ್ಟ್ 2**

**ಮುಂದಿನ ಆಲೋಚನೆ :** ಎಲೆನ್ ಜಿ ವೈಟ್‌ರವರ ಪೇಟ್ರಿಯಾರ್ಕ್ಸ್ ಆಂಡ್ ಪ್ರಾಫೆಟ್ಸ್ ನಲ್ಲಿ "ದಿ ಅಸ್ಸಿರಿಯನ್ ಕ್ಯಾಪ್ಟಿವಿಟಿ" ಪುಟಗಳು 279–292, "ದಿ ಕಾಲ್ ಆಫ್ ಯೆಶಾಯ" ಪುಟಗಳು 303–310.

"ಅವರ ಸಮಯದಲ್ಲಿ ಗುರುತಿಸಲ್ಪಟ್ಟ ದಬ್ಬಾಳಿಕೆ, ಎದ್ದು ಕಾಣುವ ಅನ್ಯಾಯ, ಅನಧಿಕೃತ ಐಷಾರಾಮಿ ಮತ್ತು ದುಂದುಗಾರಿಕೆ, ನಾಚಿಕೆಯಿಲ್ಲದ ಹಬ್ಬ ಮತ್ತು ಕುಡುಕತನ, ಸಮಗ್ರ ಸಂಪ್ರದಾಯಗಳ ಉಲ್ಲಂಘನೆ ಮತ್ತು ವಿಷಯಲಂಪಟತನ (ಕಚ್ಚೆ ಹರುಕತನ)ದ ವಿರುದ್ಧವಾಗಿ ಪ್ರವಾದಿಗಳು ತಮ್ಮ ಧ್ವನಿಗಳನ್ನು ಎತ್ತಿದರು; ಆದರೆ ಅವರ ಪ್ರತಿಭಟನೆ ವ್ಯರ್ಥವಾಯಿತು, ಅವರು ಪಾಪವನ್ನು ಉಗ್ರವಾಗಿ ಖಂಡಿಸುವುದು ವ್ಯರ್ಥವಾಯಿತು" – ಎಲೆನ್ ಜಿ ವೈಟ್‌ರವರ ಪ್ರಾಫೆಟ್ಸ್ ಆಂಡ್ ಕಿಂಗ್ಸ್, ಪುಟ 282.

ಯೆಶಾಯನಿಗೆ "ಜನರ ಸಾಮಾಜಿಕ ಪರಿಸ್ಥಿತಿಗೆ ಸಂಬಂಧಿಸದಂತೆ ನಿರ್ದಿಷ್ಟವಾಗಿ ಹೊಸ ನೋಟವು ನಿರುತ್ಸಾಹಗೊಳಿಸುತ್ತಿತ್ತು. ಮತ್ತೇ ಅವರ ಬಯಕೆಯಲ್ಲಿ, ಪುರುಷರು ಮನೆಯಿಂದ ಮನೆಗೆ ಮತ್ತು ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಸೇರಿಕೊಳ್ಳುತ್ತಿದ್ದರು... ಅಸಹಾಯಕರನ್ನು ಕಾಪಾಡುವ ಕರ್ತವ್ಯ ನ್ಯಾಯಾಧೀಶ–ರಾಗಿದ್ದಾಗ್ಯೂ ಸಹ, ಬಡವರ ಮತ್ತು ನಿರ್ಗತಿಕರಿಗೆ, ವಿಧವೆಯರು ಮತ್ತು ತಂದೆಯಿಲ್ಲದವರ ಕೂಗುಗಳಿಗೆ ಕಿವುಡ ಕಿವಿಯನ್ನು ತಿರುಗಿಸಿದರು...".

"ಅಂತಹ ಪರಿಸ್ಥಿತಿಗಳಲ್ಲಿ ಇದು ಆಶ್ಚರ್ಯವೆನಿಸುವುದಿಲ್ಲ, ಉಜ್ಜೀಯನ ಅಂತಿಮ ವರ್ಷದ ಆಳ್ವಿಕೆಯಲ್ಲಿ; ದೇವರ ಎಚ್ಚರಿಕೆಯ ಮತ್ತು ತಿದ್ದುಪಡಿ ಸಂದೇಶಗಳನ್ನು ಯೆಹೂದಕ್ಕೆ ನೀಡಲು ಯೆಶಾಯನನ್ನು ಕರೆಯಲಾಯಿತು. ಅವನು ಜವಾಬ್ದಾರಿಯಿಂದ ಕುಸಿದನು. ಅವನು ಹಠದ ಪ್ರತಿರೋಧವನ್ನು ಎದುರಿಸಬೇಕೆಂದು ಅವನು ಚೆನ್ನಾಗಿ ತಿಳಿದಿದ್ದನು" – ಪುಟಗಳು 306, 307.

"ಪ್ರವಾದಿಗಳ ಈ ಸರಳವಾದ ಮಾತನ್ನು.... ಪ್ರತಿ ಆತ್ಮಕ್ಕೆ ದೇವರ ಧ್ವನಿಯಾಗಿ ನಮ್ಮಿಂದ ಸ್ವೀಕರಿಸಬೇಕು. ಹೊರೆಹೊತ್ತ ಮತ್ತು ತುಳಿತಕ್ಕೊಳಗಾದವರಿಗೆ ನಾವು ಕರುಣೆಯ ಕ್ರಿಯೆಗಳು, ನವಿರಾದ ಮುಂದಾಲೋಚನೆ ಮತ್ತು ಕ್ರೈಸ್ತರ

ಸೌಜನ್ಯತೆಯುನ್ನು ತೋರಲು ನಾವು ಯಾವುದೇ ಅವಕಾಶವನ್ನು ಕಳೆದುಕೊಳ್ಳಬಾರದು" – ಪುಟ 327.

## ಚರ್ಚಿಸಬೇಕಾದ ಪ್ರಶ್ನೆಗಳು

1. ಪ್ರವಾದನೆಯ ಕಾರ್ಯವು ಭವಿಷ್ಯವನ್ನು ಕುರಿತು ಪ್ರವಾದಿಸುವಂತೆ ನಾವು ಸಾಮಾನ್ಯವಾಗಿ ಅರ್ಥಮಾಡಿಕೊಳ್ಳುತ್ತೇವೆ. ಹಳೆಯ ಒಡಂಬಡಿಕೆ ಪ್ರವಾದಿಗಳ ಗುರುತಿಸುವಿಕೆಯ ಗಮನವು ಅವರು ವಾಸಿಸುತ್ತಿದ್ದ ಪ್ರಪಂಚದಲ್ಲಿ ಪ್ರವಾದಿ ಪಾತ್ರದ ಬಗ್ಗೆ ನಿಮ್ಮ ಗ್ರಹಿಕೆಯನ್ನು ಬದಲಾಯಿಸುವುದು ಹೇಗೆ?

2. ಪ್ರವಾದಿಗಳ ಜೀವನ ಮತ್ತು ಸಂದೇಶವು ಸತ್ಯಕ್ಕಾಗಿ ಎದ್ದು ನಿಲ್ಲುವುದು ಎಷ್ಟು ಕಷ್ಟ ಮತ್ತು ಅಪಾಯಕಾರಿ ಎಂಬುದನ್ನು ತೋರಿಸುತ್ತದೆ. ಅವರು ಮಾಡಿದ ಕೆಲಸಗಳನ್ನು ಅವರು ಮಾಡಿದ್ದನ್ನೇ ಅವರು ಮಾಡಿದರು ಮತ್ತು ಅವರು ಮಾತನಾಡಿದ ರೀತಿಯಲ್ಲೇ ಮಾತನಾಡಿದರು ಎಂದು ನೀವು ಏಕೆ ನಂಬುತ್ತೀರಿ?

3. ಪ್ರವಾದಿಗಳ ಬರಹಗಳಲ್ಲಿ, ದೇವರು ತನ್ನ ಜನರಿಗೆ ಆಳವಾದ ಕಾಳಜಿಯನ್ನು ವಹಿಸುವುದಕ್ಕೆ ಮತ್ತು ಕೋಪಗೊಂಡಿರುವದರ ನಡುವೆ ಪರ್ಯಾಯವಾಗಿ ಕಾಣಿಸುತ್ತಾನೆ. ದೇವರ ಗುಣದ ಈ ಎರಡು ಅಂಶಗಳನ್ನು ನೀವು ಹೇಗೆ ಹೊಂದಿಕೊಳ್ಳುತ್ತೀರಿ?

**ಸಾರಾಂಶ :** ಹಳೆಯ ಒಡಂಬಡಿಕೆ ಪ್ರವಾದಿಗಳು ಭಾವೋದ್ರಿಕರಾಗಿದ್ದರು ಮತ್ತು ಸಾಮಾನ್ಯವಾಗಿ ಕೋಪ ಮತ್ತು ಆಕ್ರಮಣ ಮಾಡುವವರನ್ನು ತಲೆ ಕೆಳಗು ಮಾಡುವುದು ಮತ್ತು ಅವರ ಜನರಿಗೆ ದೇವರ ಚಿತ್ತವನ್ನು ತೋರಿಸುವುದು. ದೇವರು ಸ್ವತಃ ವ್ಯಕ್ತಪಡಿಸಿದ ಕಾಳಜಿಯನ್ನು ಪ್ರತಿಬಿಂಬಿಸುವ ಮೂಲಕ, ಈ ಭಾವೋದ್ರೇಕವು ಬಡವರಿಗೆ ಮತ್ತು ದಬ್ಬಾಳಿಕೆಗೆ ಒಳಗಾದವರಿಗೆ ನ್ಯಾಯವನ್ನು ಕೊಡಿಸುವ ಮೇಲೆ ಬಲವಾದ ಗಮನವನ್ನು ಒಳಗೊಂಡಿತ್ತು. ದೇವರ ಕಡೆಗೆ ತಿರುಗಿಕೊಳ್ಳಲು ಪ್ರವಾದಿಗಳ ಕರೆಯು ಅನ್ಯಾಯವನ್ನು ಅಂತ್ಯಗೊಳಿಸುವದನ್ನು ಒಳಗೊಂಡಿತ್ತು. ದೇವರು ತನ್ನ ಜನರ ಉತ್ತಮ ಭವಿಷ್ಯಕ್ಕಾಗಿ ಆತನ ದೃಷ್ಟಿಕೋನಗಳಲ್ಲಿ ಮಾಡಲು ವಾಗ್ದಾನ ನೀಡಿದ್ದಾನೆ.